# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1554 |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು ) |
| ಉತ್ತರಿಸುವ ದಿನಾಂಕ | 21-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಕೃಷಿ ಬೆಳೆಯನ್ನು ಬೆಳೆಯಲು ರೈತರಿಗೆ ಸಲಹೆ ನೀಡಲಾಗಿದೆ; ಕಬ್ಬು ಬೆಳೆಯನ್ನು ಬೆಳೆಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧ್ಯವಾಗುವುದೇ;<br>(ವಿವರ ನೀಡುವುದು). | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ರೈತರಿಗೆ ಭತ್ತ ಹಾಗೂ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯಲು ಸಲಹೆ ನೀಡಲಾಗುತ್ತಿದೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಬ್ಬು ಬೆಳೆಯನ್ನು ಬೆಳೆಯಲು ಸಾಧ್ಯವಿದೆ. ಜಿಲ್ಲೆಯ ಮೂಡಬಿದರೆ ಹಾಗೂ ಮುಲ್ಕಿ ತಾಲ್ಲೂಕುಗಳ ಕೆಲ ಪ್ರದೇಶಗಳಲ್ಲಿ ಕಬ್ಬು ಬೆಳೆಯನ್ನು **6.0 ಹೆ** ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. |
| ಆ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಬೆಳೆಯನ್ನು ಬೆಳೆಸಲು ನೀಡುತ್ತಿರುವ ಪ್ರೋತ್ಸಾಹವೇನು; ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರುಗಳಲ್ಲಿ ಭತ್ತದ ಕೃಷಿಯನ್ನು ಬೆಳೆಸಲಾಗುತ್ತಿದೆ;<br>(ವಿವರ ನೀಡುವುದು) | 1) ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯಡಿ ಭತ್ತದ ಬೆಳೆಯನ್ನು ಬೆಳೆಯಲು ರೈತರಿಗೆ ರೂ.9000/ಹೆ ಪ್ರೋತ್ಸಾಹಧನವನ್ನು ಆಧುನಿಕ ತಾಂತ್ರಿಕತೆಗಳನ್ನೊಳಗೊಂಡ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ನೀಡಲಾಗುತ್ತಿದೆ. ಭತ್ತದ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನದಲ್ಲಿ ನೀಡಲಾಗುತ್ತಿದೆ.<br><br>2) 2023-24ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 5257.34 ಹೆ. ರಷ್ಟು ವಿಸ್ತೀರ್ಣದಲ್ಲಿ ಭತ್ತ ಬೆಳೆಯನ್ನು ಬೆಳೆಸಲಾಗಿದೆ. |

<table>
<tr>
<td></td>
<td></td>
<td>ತಾಲ್ಲೂಕುವಾರು ಭತ್ತ ಬೆಳೆಯ ವಿವರಗಳು ಈ ಕೆಳಕಂಡಂತಿವೆ.<br><br>
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ವಿಸ್ತೀರ್ಣ (ಹೆ.ಗಳಲ್ಲಿ)</th></tr>
<tr><td>1</td><td>ಬಂಟ್ವಾಳ</td><td>625.49</td></tr>
<tr><td>2</td><td>ಬೆಳ್ತಂಗಡಿ</td><td>1068.48</td></tr>
<tr><td>3</td><td>ಕಡಬ</td><td>72.28</td></tr>
<tr><td>4</td><td>ಮಂಗಳೂರು</td><td>799.26</td></tr>
<tr><td>5</td><td>ಮೂಡಬಿದರೆ</td><td>1197.3</td></tr>
<tr><td>6</td><td>ಮುಲ್ಕಿ</td><td>1150.09</td></tr>
<tr><td>7</td><td>ಪುತ್ತೂರು</td><td>81.98</td></tr>
<tr><td>8</td><td>ಸುಳ್ಯ</td><td>62.54</td></tr>
<tr><td>9</td><td>ಉಲ್ಲಾಳ</td><td>199.92</td></tr>
<tr><td colspan="2">ಒಟ್ಟು</td><td>5257.34</td></tr>
</table>
</td>
</tr>
<tr>
<td>ಇ)</td>
<td>ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಇವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?<br>(ವಿವರ ನೀಡುವುದು)</td>
<td>ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಇಲಾಖೆಯಲ್ಲಿ 199 ಹುದ್ದೆಗಳು ಖಾಲಿ ಇರುತ್ತವೆ (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ).<br><br>
ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಯ ಉಳಿಕೆ ವೃಂದದಲ್ಲಿ ಕೆಳಕಂಡಂತೆ ನೇರ ನೇಮಕಾತಿ ಕೋಟಾದಡಿ 672 ಹುದ್ದೆಗಳನ್ನು ಭರ್ತಿಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಅಧಿಸೂಚನೆ ಹೊರಡಿಸ ಲಾಗಿರುತ್ತದೆ. ಅಂತಿಮ ಆಯ್ಕೆಪಟ್ಟಿ ಬಂದ ನಂತರ ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>
<table>
<tr><th>ವೃಂದಗಳು</th><th>ಹುದ್ದೆಗಳ ಸಂಖ್ಯೆ</th></tr>
<tr><td>ಕೃಷಿ ಅಧಿಕಾರಿ</td><td>86</td></tr>
<tr><td>ಸಹಾಯಕ ಕೃಷಿ ಅಧಿಕಾರಿ</td><td>586</td></tr>
<tr><td>ಒಟ್ಟು</td><td>672</td></tr>
</table>
</td>
</tr>
</table>

| | | |
|---|---|---|
| | | ಹೊರಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಸಹಾಯಕ ತಾಂತ್ರಿಕರ ಸೇವೆಯನ್ನು ಹಾಗೂ ಆತ್ಮ ಯೋಜನೆಯಡಿಯಲ್ಲಿ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರ ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಸೇವೆಯನ್ನು ಪಡೆಯಲಾಗಿರುತ್ತದೆ. ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ದಾಸ್ತಾನು ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಸಹ ಬಳಸಿಕೊಂಡು ಸಕಾಲದಲ್ಲಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.<br><br>ಸರ್ಕಾರದ ಆದೇಶದನ್ವಯ ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್-ಡಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗಿದೆ. |

ಸಂಖ್ಯೆ: AGRI/103/ACT/2025

**(ಎನ್. ಚೆಲುವರಾಯಸ್ವಾಮಿ)**

ಕೃಷಿ ಸಚಿವರು

| ಅನುಬಂಧ | | | | |
|---|---|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1554 | | | | |
| ಕ್ರ.ಸಂ. | ಹುದ್ದೆ | ಮಂಜೂರು | ಭರ್ತಿ | ಖಾಲಿ |
| 1 | ಜಂಟಿ ಕೃಷಿ ನಿರ್ದೇಶಕರು | 1 | 1 | 0 |
| 2 | ಉಪ ಕೃಷಿ ನಿರ್ದೇಶಕರು | 3 | 2 | 1 |
| 3 | ಸಹಾಯಕ ಕೃಷಿ ನಿರ್ದೇಶಕರು | 12 | 7 | 5 |
| 4 | ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ) | 2 | 1 | 1 |
| 5 | ಕೃಷಿ ಅಧಿಕಾರಿ | 43 | 4 | 39 |
| 6 | ಸಹಾಯಕ  ಕೃಷಿ ಅಧಿಕಾರಿ | 53 | 1 | 52 |
| 11 | ಆಡಳಿತಾಧಿಕಾರಿ | 1 | 0 | 1 |
| 12 | ಸಹಾಯಕ ಆಡಳಿತಾಧಿಕಾರಿ | 1 | 1 | 0 |
| 13 | ಅಧೀಕ್ಷಕರು | 11 | 5 | 6 |
| 14 | ಪ್ರಥಮ ದರ್ಜೆ ಸಹಾಯಕರು | 18 | 6 | 12 |
| 15 | ದ್ವಿತೀಯ ದರ್ಜೆ ಸಹಾಯಕರು | 19 | 4 | 15 |
| 16 | ಶೀಘ್ರಲಿಪಿಗಾರರು | 2 | 2 | 0 |
| 17 | ಹಿರಿಯ ಬೆರಳಚ್ಚುಗಾರರು | 1 | 0 | 1 |
| 18 | ಬೆರಳಚ್ಚುಗಾರರು | 10 | 0 | 10 |
| 19 | ಪ್ರಯೋಗಶಾಲಾ ಸಹಾಯಕರು | 3 | 0 | 3 |
| 20 | ಅಟೆಂಡರ್ | 4 | 0 | 4 |
| 21 | ಹಿರಿಯ/ವಾಹನ ಚಾಲಕರು | 1 | 1 | 0 |
| 22 | ವಾಹನ ಚಾಲಕರು | 8 | 0 | 8 |
| 23 | ಗ್ರೂಪ್ ಡಿ | 40 | 1 | 39 |
| 24 | ಬಾಣಸಿಗ | 2 | 0 | 2 |
| | **ಒಟ್ಟು ಹುದ್ದೆಗಳು** | **235** | **36** | **199** |